# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಗುರುವಾರ, ೨೧ ಆಗಸ್ಟ್, ೨೦೨೫ (ಶ್ರಾವಣ ೩೦, ಶಕವರ್ಷ ೧೯೪೭)<br>BENGALURU, THURSDAY, 21 AUGUST, 2025 (SHRAVANA 30, SHAKAVARSHA 1947) | ನಂ. ೪೯೫<br>No. 495 |
|---|---|---|


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಏಳನೇ ಅಧಿವೇಶನ**

## ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–62)**

ಕರ್ನಾಟಕ ರಾಜ್ಯದಲ್ಲಿ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳಿಗೆ ಕ್ಷೇಮಾಭಿವೃದ್ಧಿ ಕ್ರಮಗಳನ್ನು ಮತ್ತು ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ವಿರುದ್ಧ ದೌರ್ಜನ್ಯಗಳ ಅಪರಾಧ ಎಸಗುವುದನ್ನು ತಡೆಗಟ್ಟುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ವಿಧೇಯಕ.

ಕರ್ನಾಟಕ ರಾಜ್ಯದಲ್ಲಿ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳಿಗೆ ಕ್ಷೇಮಾಭಿವೃದ್ಧಿ ಕ್ರಮಗಳನ್ನು ಮತ್ತು ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ವಿರುದ್ಧ ದೌರ್ಜನ್ಯಗಳ ಅಪರಾಧ ಎಸಗುವುದನ್ನು ತಡೆಗಟ್ಟುವುದಕ್ಕಾಗಿ ಹಾಗೂ ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ಅಧಿನಿಯಮ, 2025 ಎಂದು ಕರೆಯತಕ್ಕದ್ದು;

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂತೆ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) “ಫಲಾನುಭವಿ” ಎಂದರೆ ಈ ಅಧಿನಿಯಮದ 4ನೇ ಪ್ರಕರಣದಡಿ ನೋಂದಾಯಿಸಲಾದ ಸಂಪ್ರಾದಾಯಿಕ ಅಲೆಮಾರಿ ಕುರಿಗಾಹಿ;

(ಬಿ) "ಆಯುಕ್ತ" ಎಂದರೆ ಆಯುಕ್ತ, ಪಶುಸಂಗೋಪನೆ ಮತ್ತು ಪಶುಪಾಲನಾ ಸೇವೆಗಳ ಇಲಾಖೆ, ಕರ್ನಾಟಕ ಸರ್ಕಾರ;

(ಸಿ) "ಇಲಾಖೆ" ಎಂದರೆ ಪಶುಸಂಗೋಪನೆ ಮತ್ತು ಪಶುಪಾಲನಾ ಸೇವೆಗಳ ಇಲಾಖೆ, ಕರ್ನಾಟಕ ಸರ್ಕಾರ;

(ಡಿ) "ಅಭಿವೃದ್ಧಿ ನಿಗಮ" ಎಂದರೆ ಪಶುಸಂಗೋಪನೆ ಮತ್ತು ಪಶುಪಾಲನಾ ಸೇವೆಗಳ ಇಲಾಖೆ, ಕರ್ನಾಟಕ ಸರ್ಕಾರವು ಕಂಪನಿಗಳ ಅಧಿನಿಯಮ, 2013 (2013ರ ಕೇಂದ್ರ ಅಧಿನಿಯಮ,18)ರಡಿ ನೋಂದಾಯಿಸಲಾದ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ;

(ಇ) "ಮಾರುಕಟ್ಟೆ"ಯು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 27)ರ 2ನೇ ಪ್ರಕರಣದ (18)ನೇ ಖಂಡದಡಿ ಅದಕ್ಕೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು;

(ಎಫ್) "ಮಾರಾಟ" ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 27)ರ 2ನೇ ಪ್ರಕರಣದ (18ಎ)ಖಂಡದಡಿ ಅದಕ್ಕೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು

(ಜಿ) "ಮಾರುಕಟ್ಟೆ ಶುಲ್ಕಗಳು" ಎಂದರೆ ಈ ಅಧಿನಿಯಮದ 7ನೇ ಪ್ರಕರಣದಡಿ ವಿಧಿಸಲಾದ ಶುಲ್ಕ;

(ಎಚ್) "ನಿಯಮಿಸಲಾದುದು" ಎಂದರೆ ರಾಜ್ಯ ಸರ್ಕಾರವು ಈ ಅಧಿನಿಯಮದಡಿ ನಿಯಮಗಳ ಮೂಲಕ ನಿಯಮಿಸಲಾದುದು;

(ಐ) "ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿ" ಎಂದರೆ ಸಾಂಪ್ರದಾಯಿಕ ಮಾರ್ಗಗಳ ಮೂಲಕ ಮೇವು, ನೀರು ಮತ್ತು ಜೀವನಾಧಾರಕದ ಹುಡುಕಾಟದಲ್ಲಿ ಕುರಿ, ಮೇಕೆ ಅಥವಾ ಅಂಥ ಜಾನುವಾರುಗಳ ಸಾಂಪ್ರದಾಯಿಕ, ಅಲೆಮಾರಿ ಅಥವಾ ಹಂಗಾಮಿ ಸಾಕಾಣಿಕೆಯಲ್ಲಿ ಮೂಲವಾಗಿ ತೊಡಗಿಸಿಕೊಂಡ ಯಾರೇ ವ್ಯಕ್ತಿ;

(ಜೆ) "ಕ್ಷೇಮಾಭಿವೃದ್ಧಿ ಮಂಡಳಿ" ಎಂದರೆ ಈ ಅಧಿನಿಯಮದಡಿ ಸ್ಥಾಪಿಸಿದ ನಿಧಿಯನ್ನು ನಿರ್ವಹಿಸಲು 8ನೇ ಪ್ರಕರಣದಡಿ ರಚಿಸಲಾದ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ಮಂಡಳಿ;

**3. ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ನೋಂದಣಿ.-**(1) ಈ ಅಧಿನಿಯಮದಡಿ ಪ್ರತಿಯೊಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯು ಫಲಾನುಭವಿಯಾಗಿ ನೋಂದಾಯಿಸಲು ಅರ್ಹನಾಗಿರತಕ್ಕದ್ದು.

(2) ಈ ಕುರಿತು ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(3) ಉಪ-ಪ್ರಕರಣ (2)ರಡಿ ಮಾಡಲಾದ ಪ್ರತಿಯೊಂದು ಅರ್ಜಿಯು ನಿಯಮಿಸಬಹುದಾದಂಥ ದಸ್ತಾವೇಜುಗಳೊಂದಿಗೆ ಲಗತ್ತಾಗಿರತಕ್ಕದ್ದು.

(4) ಉಪ-ಪ್ರಕರಣ (2)ರಡಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯು, ಈ ಅಧಿನಿಯಮ ಮತ್ತು ಅದರಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳ ಮೇರೆಗೆ ಅರ್ಜಿದಾರನು ಅರ್ಹನೆಂದು ಮನಗಂಡರೆ, ಆತನು ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ಹೆಸರನ್ನು ಈ ಅಧಿನಿಯಮದಡಿ ಫಲಾನುಭವಿ ಎಂಬುದಾಗಿ ನೊಂದಾಯಿಸತಕ್ಕದ್ದು:

ಪರಂತು ಅರ್ಜಿದಾರನಿಗೆ ಆತನ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ಹೊರತು ನೋಂದಣಿಗಾಗಿನ ಯಾವುದೇ ಅರ್ಜಿಯನ್ನು ಅಧಿಕಾರಿಯು ತಿರಸ್ಕರಿಸತಕ್ಕದ್ದಲ್ಲ.

(5) ಉಪ-ಪ್ರಕರಣ (4)ರಡಿಯಲ್ಲಿನ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು ಅಂಥ ತೀರ್ಮಾನದ ದಿನಾಂಕದಿಂದ ಮೂವತ್ತು ದಿನದೊಳಗಾಗಿ ಪಶುಸಂಗೋಪನೆ ಮತ್ತು ಪಶುಪಾಲನಾ ಸೇವೆಗಳ ಇಲಾಖೆಯ ಆಯುಕ್ತ ಅಥವಾ ಈ ಕುರಿತು ರಾಜ್ಯ ಸರ್ಕಾರವು ಅಧಿಸೂಚಿಸಿದ ಯಾರೇ ಇತರ ಅಧಿಕಾರಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು ಮತ್ತು ಅಂಥ ಮೇಲ್ಮನವಿಯ ಮೇಲೆ ಆಯುಕ್ತ ಅಥವಾ ಇತರ ಅಧಿಕೃತಗೊಳಿಸಿದ ಅಧಿಕಾರಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು:

ಪರಂತು ಆಯುಕ್ತ ಅಥವಾ ಈ ಕುರಿತು ರಾಜ್ಯ ಸರ್ಕಾರವು ಅಧಿಸೂಚಿಸಿದ ಯಾರೇ ಇತರ ಅಧಿಕಾರಿಯು, ಸಕಾಲಿಕವಾಗಿ ಮೇಲ್ಮನವಿ ಸಲ್ಲಿಸುವುದನ್ನು ತಡೆಯಲು ಅರ್ಜಿದಾರನಿಗೆ ಸಾಕಷ್ಟು ಕಾರಣಗಳಿವೆ ಎಂದು ಮನಗಂಡರೆ, ಆತನು ಮೂವತ್ತು ದಿನಗಳ ಸದರಿ ಅವಧಿಯು ಮುಕ್ತಾಯಗೊಂಡ ತರುವಾಯವೂ ಮೇಲ್ಮನವಿಯನ್ನು ಪುರಸ್ಕರಿಸಬಹುದು.

(6) ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆಯ ಆಯುಕ್ತನು ನಿಯಮಿಸಬಹುದಾದಂಥ ರಿಜಿಸ್ಟರ್‌ಗಳನ್ನು ನಿರ್ವಹಿಸಲು ಅಧಿಕಾರಿಯನ್ನು ಅಧಿಕೃತಗೊಳಿಸತಕ್ಕದ್ದು.

**4. ಸೌಲಭ್ಯಗಳ ಹಕ್ಕು.-** ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದಡಿಯಲ್ಲಿ ಫಲಾನುಭವಿಯಾಗಿ ನೋಂದಾಯಿಸಲಾದ ಪ್ರತಿಯೊಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯು ಈ ಅಧಿನಿಯಮದಡಿ ಉಪಬಂಧಿಸಲಾದ ಪ್ರಯೋಜನಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

**5. ಗುರುತಿನ ಚೀಟಿಗಳು.-** (1) ಸರ್ಕಾರವು ಪ್ರತಿಯೊಬ್ಬ ಫಲಾನುಭವಿಗೆ ಗುರುತಿನ ಚೀಟಿಯ ಮೇಲೆ ಯುಕ್ತವಾಗಿ ಅವರ ಛಾಯಾಚಿತ್ರ ಅಂಟಿಸುವುದರೊಂದಿಗೆ ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಅವರ ಅವಲಂಬಿತರು ಮತ್ತು ಜಾನುವಾರುಗಳ ವಿವರಗಳನ್ನು ನಮೂದಿಸಲು ಸಾಕಷ್ಟು ಸ್ಥಳದೊಂದಿಗೆ ಗುರುತಿನ ಚೀಟಿಯನ್ನು ಒದಗಿಸುವುದಕ್ಕಾಗಿ ಜವಾಬ್ದಾರಿಯುತ ಸಕ್ಷಮ ಪ್ರಾಧಿಕಾರಿಯನ್ನು ಅಧಿಸೂಚಿಸತಕ್ಕದ್ದು.

(2) ಈ ಅಧಿನಿಯಮದಡಿ ಗುರುತಿನ ಚೀಟಿಯನ್ನು ಪಡೆದ ಫಲಾನುಭವಿಯು ಸರ್ಕಾರದ ಯಾರೇ ಅಧಿಕಾರಿಯು ಅಗತ್ಯಪಡಿಸಿದಾಗಲೆಲ್ಲಾ ಅದನ್ನು ಹಾಜರುಪಡಿಸತಕ್ಕದ್ದು.

(3) ಈ ಅಧಿನಿಯಮದಡಿ ಯಾರೇ ಫಲಾನುಭವಿಗೆ ನೀಡಲಾದ ಗುರುತಿನ ಚೀಟಿಯು ನಿಯಮಿಸಲಾದಂಥ ಕಾಲಾವಧಿಗಾಗಿ ಸಿಂಧುವಾಗಿರತಕ್ಕದ್ದು.

(4) ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ಕಾಗದಪತ್ರ ಮತ್ತು ವಿದ್ಯುನ್ಮಾನ ದಾಖಲೆಗಳನ್ನು 3ನೇ ಪ್ರಕರಣದ (6)ನೇ ಉಪಪ್ರಕರಣದಡಿ ಅಧಿಕೃತಗೊಳಿಸಲಾದ ಅಧಿಕಾರಿಯು ನಿರ್ವಹಿಸತಕ್ಕದ್ದು.

**6. ಸ್ಕೀಮುಗಳನ್ನು ರೂಪಿಸುವುದು.-** (1) ರಾಜ್ಯ ಸರ್ಕಾರವು ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳಿಗೆ ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ಕ್ಷೇಮಾಭಿವೃದ್ಧಿ ಸ್ಕೀಮುಗಳನ್ನು ಕಾಲಕಾಲಕ್ಕೆ ರೂಪಿಸತಕ್ಕದ್ದು ಮತ್ತು ಅಧಿಸೂಚಿಸತಕ್ಕದ್ದು,-

(i) ಕೈಗೆಟಕುವ ಬೆಲೆಯ ವಸತಿ ಮತ್ತು ವಸತಿಯ ಉದ್ದೇಶಗಳಿಗಾಗಿ ಭೂಮಿಯ ಮಂಜೂರಾತಿ;

(ii) ಜೀವ ವಿಮೆ, ಆರೋಗ್ಯ ವಿಮೆ, ಪಶು ವಿಮೆ ಮತ್ತು ವಿಕಲತೆಯ ವ್ಯಾಪ್ತಿ;

(iii) ಆರೋಗ್ಯ ಸೌಲಭ್ಯಗಳು;

(iv) ಶೈಕ್ಷಣಿಕ ಸೌಲಭ್ಯಗಳು;

(v) ಕೌಶಲ್ಯ ಉನ್ನತೀಕರಣ;

(vi) ಆಹಾರ ಭದ್ರತೆ;

(vii) ಜಾನುವಾರುಗಳಿಗೆ ಲಸಿಕೆ ಮತ್ತು ಚಿಕಿತ್ಸೆ;

(viii) ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಉತ್ಪನ್ನಗಳಿಗಾಗಿ ಮಾರಾಟ ಬೆಂಬಲ;

(ix) ಜಾನುವಾರು ನಷ್ಟದ ಸಂದರ್ಭದಲ್ಲಿ ಹಣಕಾಸು ನಷ್ಟಪರಿಹಾರ; ಮತ್ತು

(x) ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ ಯಾವುದೇ ಇತರ ಪ್ರಯೋಜನಗಳು.

(2) ಈ ಪ್ರಕರಣದಡಿ ರಾಜ್ಯ ಸರ್ಕಾರವು ಅಧಿಸೂಚಿಸಿದ ಯಾವುದೇ ಸ್ಕೀಮಿಗೆ,-

(ಎ) ರಾಜ್ಯ ಸರ್ಕಾರವು ಪೂರ್ಣ ಧನಸಹಾಯ ಮಾಡಬಹುದು; ಅಥವಾ

(ಬಿ) ರಾಜ್ಯ ಸರ್ಕಾರವು ಭಾಗಶಃ ಧನಸಹಾಯ ಮಾಡಬಹುದು; ಅಥವಾ

(ಸಿ) ರಾಜ್ಯಸರ್ಕಾರವು ನಿರ್ದಿಷ್ಟಪಡಿಸಬಹುದಾದಂತೆ ಸ್ಕೀಮಿನಲ್ಲಿ ಸ್ಕೀಮಿನ ಫಲಾನುಭವಿಗಳಿಂದ ಸಂಗ್ರಹಿಸುವ ವಂತಿಗೆಗಳ ಮುಖಾಂತರ ಭಾಗಶಃ ಧನಸಹಾಯ ಪಡೆಯಬಹುದು; ಅಥವಾ

(ಡಿ) ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ನಿಧಿ ಅಥವಾ ಸ್ಕೀಮಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ಮೂಲವನ್ನು ಒಳಗೊಂಡಂತೆ ಯಾವುದೇ ಮೂಲದಿಂದ ಧನಸಹಾಯ ಪಡೆಯಬಹುದು;

(3) ರಾಜ್ಯ ಸರ್ಕಾರವು ತಾನು ರೂಪಿಸಿದ ಸ್ಕೀಮುಗಳಿಗಾಗಿ ಕೇಂದ್ರ ಸರ್ಕಾರದಿಂದ ಹಣಕಾಸಿನ ನೆರವನ್ನು ಕೋರಬಹುದು.

**7. ಮಾರುಕಟ್ಟೆ ಶುಲ್ಕಗಳ ವಿಧಿಸುವಿಕೆ.-** (1) ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಧಿಕೃತ ಮಾರುಕಟ್ಟೆಯಿಂದ ಕುರಿ ಅಥವಾ ಮೇಕೆಯನ್ನು ಖರೀದಿಸಿದ ಯಾರೇ ವ್ಯಕ್ತಿಯು, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 27)ರಡಿ ವಿಧಿಸಲಾದ ಮಾರುಕಟ್ಟೆ ಶುಲ್ಕವನ್ನು ಮಾರುಕಟ್ಟೆ ಸಮಿತಿಗೆ ಪಾವತಿಸತಕ್ಕದ್ದು.

(2) ಯಾರೇ ವ್ಯಕ್ತಿಯು ಈ ಪ್ರಕರಣದಡಿ ಪಾವತಿಸಬೇಕಾದ ಮಾರುಕಟ್ಟೆ ಶುಲ್ಕವನ್ನು ಪಾವತಿಸಲು ತಪ್ಪಿದರೆ, ಮಾರುಕಟ್ಟೆ ಸಮಿತಿಯು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 27)ರಡಿ ದಂಡವನ್ನು ವಿಧಿಸುವ ಅಧಿಕಾರ ಹೊಂದಿರತಕ್ಕದ್ದು.

(3) ಉಪಪ್ರಕರಣ (1)ರಡಿ ಸಂಗ್ರಹಿಸಲಾದ ಮಾರುಕಟ್ಟೆ ಶುಲ್ಕವನ್ನು, 8ನೇ ಪ್ರಕರಣದ (1)ನೇ ಉಪಪ್ರಕರಣದಡಿ ಸ್ಥಾಪಿಸಲಾದ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿ ಕ್ಷೇಮಾಭಿವೃದ್ಧಿ ನಿಧಿಗೆ ನಿಯಮಿಸಬಹುದಾದಂಥ ವಿಧಾನದಲ್ಲಿ ಜಮೆ ಮಾಡತಕ್ಕದ್ದು.

**8. ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ಮಂಡಲಿ.-** (1) ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದಡಿ ನಿಯಮಿಸಬಹುದಾದಂಥ ಉದ್ದೇಶಗಳಿಗಾಗಿ ಉಪಯೋಗಿಸಿಕೊಳ್ಳಲೆಂದು ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ನಿಧಿಯೆಂದು ಕರೆಯಲಾಗುವ ನಿಧಿಯನ್ನು ರಚಿಸತಕ್ಕದ್ದು.

(2) ರಾಜ್ಯ ಸರ್ಕಾರವು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ನಿಧಿಯನ್ನು ನಿರ್ವಹಿಸಲು ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ಮಂಡಲಿ ಎಂದು ಕರೆಯಲಾಗುವ ಮಂಡಲಿಯನ್ನು ರಚಿಸಬಹುದು ಮತ್ತು ಅಧಿಸೂಚಿಸಬಹುದು.

(3) ಕ್ಷೇಮಾಭಿವೃದ್ಧಿ ಮಂಡಲಿಯು ಅಧ್ಯಕ್ಷರು ಮತ್ತು ಅಭಿವೃದ್ಧಿ ನಿಗಮದಿಂದ ನಿಯಮಿಸಬಹುದಾದಂಥ ಇತರ ಅಧಿಕಾರಿಗಳನ್ನು ರಾಜ್ಯ ಸರ್ಕಾರವು ಈ ಕುರಿತು ಅಧಿಸೂಚನೆಯ ಮೂಲಕ ಗೊತ್ತುಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಒಳಗೊಂಡಿರತಕ್ಕದ್ದು.

(4) ಮಂಡಲಿಯು, ಈ ಅಧಿನಿಯಮದಡಿಯಲ್ಲಿ ಅಥವಾ ಈ ಅಧಿನಿಯಮದಡಿ ರಚಿಸಲಾದ ಯಾವುದೇ ಇತರ ನಿಯಮಗಳಡಿ ವಿಧಿಸಿದಂಥ ನಿರ್ಬಂಧಗಳಿಗೆ ಒಳಪಟ್ಟು, ಶಾಶ್ವತ ಉತ್ತರಾಧಿಕಾರ ಹಾಗೂ ಸಾಮಾನ್ಯ ಮೊಹರನ್ನು ಹೊಂದಿರುವ, ಅದನ್ನು ರಚಿಸಿದ ಉದ್ದೇಶಕ್ಕಾಗಿ ಸೂಕ್ತ ಅಥವಾ ಯುಕ್ತವಾದ ಎಲ್ಲಾ ಅವಶ್ಯಕ ವಿಷಯಗಳನ್ನು ಮಾಡುವ ಹಾಗೂ ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ ಹಾಗೂ ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಹಾಗೂ ದಾವೆಗೆ ಗುರಿಯಾಗತಕ್ಕದ್ದು.

(5) ಕ್ಷೇಮಾಭಿವೃದ್ಧಿ ಮಂಡಲಿಯಿಂದ ವಹಿಸಲಾದ ಎಲ್ಲಾ ವೆಚ್ಚಗಳನ್ನು ಸದರಿ ನಿಧಿಯಿಂದ ಖರ್ಚುಮಾಡತಕ್ಕದ್ದು.

(6) ನಿಧಿಯನ್ನು, ಈ ಅಧಿನಿಯಮದ 6ನೇ ಪ್ರಕರಣದಡಿ ರಾಜ್ಯ ಸರ್ಕಾರವು ಅಧಿಸೂಚಿಸಿದ ಸ್ಕೀಮುಗಳ ಅನುಷ್ಠಾನಕ್ಕಾಗಿ ಮತ್ತು ನಿಯಮಿಸಬಹುದಾದ ಯಾವುದೇ ಇತರೆ ಉದ್ದೇಶಕ್ಕಾಗಿಯೂ ಸಹ ಬಳಸಿಕೊಳ್ಳಬಹುದು.

**9. ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ವಿರುದ್ಧದ ಅಪರಾಧಗಳು.-** ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯಲ್ಲದ ಯಾರೇ ವ್ಯಕ್ತಿಯು,-

(i) ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯು ಯಾವುದೇ ಕಾನೂನಾತ್ಮಕ ಆಧಾರವಿಲ್ಲದೇ ಯಾವುದೇ ಸಾರ್ವಜನಿಕ ಸ್ವತ್ತು, ಸರ್ಕಾರಿ ಭೂಮಿ ಅಥವಾ ಅರಣ್ಯ ಭೂಮಿಗೆ (ಮೀಸಲು ಅರಣ್ಯವನ್ನು ಹೊರತುಪಡಿಸಿ) ಪ್ರವೇಶಿಸುವುದನ್ನು ನಿರಾಕರಿಸಿದಲ್ಲಿ, ಅಂಥ ವ್ಯಕ್ತಿಯು ಒಂದು ವರ್ಷದ ಅವಧಿಯ ಕಾರಾವಾಸದಿಂದ ಮತ್ತು ಐವತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(ii) ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯು ಯಾವುದೇ ಸಾರ್ವಜನಿಕ ಮಾರ್ಗಕ್ಕಿರುವ ಪ್ರವೇಶದ ರೂಢಿಜನ್ಯ ಹಕ್ಕು ಅಥವಾ ಮೇಯಿಸುವ ರೂಢಿ ಜನ್ಯ ಹಕ್ಕನ್ನು ನಿರಾಕರಿಸುವ ಅಥವಾ ಇತರ ಸಾರ್ವಜನಿಕರಿಗೆ ಬಳಸಲು ಅಥವಾ ಪ್ರವೇಶಿಸಲು ಹಕ್ಕಿರುವಂಥ ಸಾರ್ವಜನಿಕ ಮಾರ್ಗದ ಸ್ಥಳವನ್ನು ಬಳಸುವಲ್ಲಿ ಅಥವಾ ಪ್ರವೇಶಿಸುವಲ್ಲಿ ಅವರನ್ನು ತಡೆಯುವುದಕ್ಕಾಗಿ ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ದಾರಿಗೆ ಅಡ್ಡಿಯನ್ನುಂಟು ಮಾಡುವ, ಅಂಥ ವ್ಯಕ್ತಿಯು ಎರಡು ವರ್ಷಗಳ ಅವಧಿಯ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(iii) ಯಾರೇ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯನ್ನು ಉದ್ದೇಶಪೂರ್ವಕವಾಗಿ ಅವಮಾನಿಸಿದಲ್ಲಿ ಅಥವಾ ಮೌಖಿಕವಾಗಿ ನಿಂದಿಸಿದಲ್ಲಿ ಅಂಥ ವ್ಯಕ್ತಿಯು ಆರು ತಿಂಗಳ ಅವಧಿಯ ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(iv) ಮರಣವನ್ನುಂಟುಮಾಡುವ ಉದ್ದೇಶದಿಂದ ಅಥವಾ ಮರಣವನ್ನುಂಟು ಮಾಡುವಂಥ ದೈಹಿಕವಾಗಿ ಗಾಯಗೊಳಿಸುವ ಉದ್ದೇಶದಿಂದ, ಅಥವಾ ಅಂಥ ಕೃತ್ಯದಿಂದ ಮರಣವುಂಟಾಗಬಹುದು ಎಂಬ ತಿಳುವಳಿಕೆಯಿಂದ ಅಂಥ ಕೃತ್ಯವನ್ನೆಸಗುವ ಮೂಲಕ ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ಮರಣಕ್ಕೆ ಕಾರಣನಾಗುವ ಅಂಥ ವ್ಯಕ್ತಿಯು ತತ್ಕಾಲದಲ್ಲಿ ಜಾರಿಯಲ್ಲಿರುವ ಸಂಬಂಧಪಟ್ಟ ಕ್ರಿಮಿನಲ್ ಕಾನೂನುಗಳಡಿಯಲ್ಲಿ ದಂಡಿತನಾಗತಕ್ಕದ್ದು.

(v) ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45)ರ 75ನೇ ಪ್ರಕರಣದಡಿಯಲ್ಲಿ ಲೈಂಗಿಕ ಕಿರುಕುಳದ ರೀತಿಯಲ್ಲಿ ವರ್ತಿಸುವ ಅಂಥ ವ್ಯಕ್ತಿಯು ತತ್ಕಾಲದಲ್ಲಿ ಜಾರಿಯಲ್ಲಿರುವ ಸಂಬಂಧಪಟ್ಟ ಕ್ರಿಮಿನಲ್ ಕಾನೂನುಗಳ ಉಪಬಂಧಗಳನುಸಾರ ದಂಡಿತನಾಗತಕ್ಕದ್ದು

(vi) ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ವಿರುದ್ಧದ ಅಪರಾಧಗಳು ಹಾಗೂ ಸ್ವತ್ತಿನ ವಿರುದ್ಧದ ಅಪರಾಧಗಳು ಅಥವಾ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿನ ಯಾವುದೇ ಇತರ ಅಪರಾಧಕ್ಕೆ ಸಂಬಂಧಿಸಿದಂತೆ ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯನ್ನು ನ್ಯಾಯಿಕ ನೆರವನ್ನು (Judicial Recourse) ಪಡೆದುಕೊಳ್ಳುವುದರಿಂದ ತಡೆಯುವ ಅಂಥ ವ್ಯಕ್ತಿಯು ಎರಡು ವರ್ಷಗಳ ಅವಧಿಯ ಕಾರವಾಸದಿಂದ ಮತ್ತು ಐವತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(vii) ಕಾನೂನಿನ ವಿದ್ಯುಕ್ತ ಕ್ರಮವನ್ನು ಉಲ್ಲಂಘಿಸುವ ಮತ್ತು ಸೂಕ್ತ ಪ್ರಾಧಿಕಾರದ ಗಮನಕ್ಕೆ ತರದೆಯೇ ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯಿಂದ ಹಾನಿಗಳನ್ನು ಕ್ಲೇಮು ಮಾಡುವ ಅಂಥ ವ್ಯಕ್ತಿಯು ಮೂರು ವರ್ಷಗಳ ಅವಧಿಯ ಕಾರವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**10. ಸ್ವತ್ತಿನ ವಿರುದ್ಧದ ಅಪರಾಧಗಳು,-** (1) ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯಲ್ಲದ,-

(i) ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗೆ ಸೇರಿದ ಚರ ಅಥವಾ ಅನ್ಯಥಾ ಸ್ವತ್ತಿಗೆ ಹಾನಿಯನ್ನುಂಟು ಮಾಡುವ ಯಾರೇ ವ್ಯಕ್ತಿಯು; ಅಥವಾ

(ii) ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗೆ ಸೇರಿದ ಸ್ವತ್ತನ್ನು ಅವರ ಸಮ್ಮತಿಯಿಲ್ಲದೆ ಸ್ವಾಧೀನಾಂತರಿಸುವ ಯಾರೇ ವ್ಯಕ್ತಿಯು; ಅಥವಾ

(iii) ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ಸ್ವತ್ತಿನ ವಿರುದ್ಧ ಅಪರಾಧ ಎಸಗಿರುವನೆಂದು ಹೇಳಲಾದ, ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯಿಂದ ಅವರ ಸ್ವತ್ತನ್ನು ಕಸಿದುಕೊಳ್ಳುವ ಯಾರೇ ವ್ಯಕ್ತಿಯು,

- ಎರಡು ವರ್ಷಗಳ ಅವಧಿಯ ಕಾರಾವಾಸದಿಂದ ಮತ್ತು ಹಾನಿಗೊಳಗಾದ ಸ್ವತ್ತಿನ ಮೌಲ್ಯಕ್ಕೆ ವಿಧಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯಲ್ಲದ ಯಾರೇ ವ್ಯಕ್ತಿಯು,-

(i) ಯಾರೇ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ಸ್ವಾಧೀನದಿಂದ ಯಾವುದೇ ಜಾನುವಾರನ್ನು ಆ ವ್ಯಕ್ತಿಯ ಒಪ್ಪಿಗೆಯಿಲ್ಲದೆ ಅಪ್ರಮಾಣಿಕವಾಗಿ ಪಡೆದುಕೊಳ್ಳಲು ಉದ್ದೇಶಿಸುವ ಅಂಥ ಪಡೆದುಕೊಳ್ಳುವಿಕೆಯನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಆ ಜಾನುವಾರನ್ನು ಸಾಗಿಸುವ, ಅದನ್ನು ದೂರಸಾಗಿಸುವ ಅಥವಾ ಅದನ್ನು ದುರುಪಯೋಗಿಸಿಕೊಳ್ಳುವ; ಅಥವಾ

(ii) ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ಜಾನುವಾರನ್ನು ಯಾವುದೇ ಸಾರ್ವಜನಿಕ ಸ್ವತ್ತು, ಸರ್ಕಾರಿ ಭೂಮಿ ಅಥವಾ ಅರಣ್ಯ ಭೂಮಿ(ಮೀಸಲು ಅರಣ್ಯವನ್ನು ಹೊರತುಪಡಿಸಿ)ಯನ್ನು ಪ್ರವೇಶಿಸುವುದನ್ನು ನಿರಾಕರಿಸಲು ಉದ್ದೇಶಿಸುವ, ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ಜಾನುವಾರಿಗೆ ಯಾವುದೇ ಹಾನಿಯನ್ನುಂಟುಮಾಡುವ, ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಯ ಸ್ವತ್ತಿನ ವಿರುದ್ಧ ಅಪರಾಧವನ್ನು ಎಸಗಿದ್ದಾನೆಂದು ಹೇಳಲಾಗುವ ಯಾರೇ ವ್ಯಕ್ತಿಯು,

- ಎರಡು ವರ್ಷಗಳ ಅವಧಿಯ ಕಾರಾವಾಸದಿಂದ ಮತ್ತು ಐವತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**11. ಸರ್ಕಾರಿ ನೌಕರರಿಂದ ಎಸಗಲಾಗುವ ಅಪರಾಧಗಳು.-** ಸರ್ಕಾರಿ ನೌಕರನಾಗಿದ್ದುಕೊಂಡು, ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗೆ ಹಾನಿ ಅಥವಾ ಆರ್ಥಿಕ ನಷ್ಟವನ್ನುಂಟುಮಾಡುವ ಉದ್ದೇಶದಿಂದ ಜಾರಿಯಲ್ಲಿರುವ ಯಾವುದೇ ಕಾನೂನಿನಡಿಯಲ್ಲಿ ಆತನು ನಿರ್ವಹಿಸಬೇಕೆಂದು ಅಗತ್ಯಪಡಿಸಿರುವ ಆತನ ಕರ್ತವ್ಯಗಳನ್ನು ಇಚ್ಛಾಪೂರ್ವಕವಾಗಿ ನಿರ್ಲಕ್ಷಿಸುವ ಯಾರೇ ವ್ಯಕ್ತಿಯು ಸಂಬಂಧಪಟ್ಟ ಸಿವಿಲ್ ಸೇವಾ ನಿಯಮಗಳಡಿ ದಂಡಿತನಾಗತಕ್ಕದ್ದು:

ಪರಂತು, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 46)ರ ಅನುಸಾರ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳಿಂದ ಬಂದಿರುವ ದೂರುಗಳ ಮೇಲೆ ಕ್ರಮ ವಹಿಸಲು ಅಥವಾ ತನಿಖೆಯನ್ನು ಕೈಗೊಳ್ಳಲು ಇಚ್ಛಾಪೂರ್ವಕವಾಗಿ ನಿರಾಕರಿಸುವ ಯಾವುದೆ ಪೊಲೀಸ್ ಅಧಿಕಾರಿಯು ಈ ಪ್ರಕರಣದ ಉದ್ದೇಶಗಳಿಗಾಗಿ ಅಪರಾಧ ಎಸಗಿರುವನೆಂದು ಹೇಳತಕ್ಕದ್ದು.

**12. ಅಪರಾಧಗಳು ಸಂಜ್ಞೇಯ ಮತ್ತು ಜಾಮೀನು ರಹಿತವಾಗಿರುವುದು**:- ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 46)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿನ ಒಂದು ಅಪರಾಧಕ್ಕೆ ಆರೋಪಿತನಾದ ಯಾರೇ ವ್ಯಕ್ತಿಯು ಈ ಮುಂದಿನವುಗಳ ಹೊರತಾಗಿ ಜಾಮೀನಿನ ಮೇಲೆ ಅಥವಾ ಅವರ ಸ್ವಯಂ ಬಂಧಪತ್ರದ (Own bond) ಮೇಲೆ ಬಿಡುಗಡೆಯಾಗತಕ್ಕದ್ದಲ್ಲ,-

(i) ಅಂಥ ಬಿಡುಗಡೆಗಾಗಿ ಸಲ್ಲಿಸಿದ ಅರ್ಜಿಗೆ ವಿರೋಧ ವ್ಯಕ್ತಪಡಿಸಲು ಸರ್ಕಾರಿ ಅಭಿಯೋಜಕನಿಗೆ ಅವಕಾಶ ನೀಡಿದ ಹೊರತು; ಮತ್ತು

(ii) ಸರ್ಕಾರಿ ಅಭಿಯೋಜಕನು ಅಂಥ ಅರ್ಜಿಗೆ ವಿರೋಧ ವ್ಯಕ್ತಪಡಿಸಿದ ಸಂದರ್ಭದಲ್ಲಿ, ನ್ಯಾಯಾಲಯವು ಅಂಥ ಅಪರಾಧಕ್ಕೆ ಆತನು ದೋಷಿಯಲ್ಲವೆಂದು ನಂಬುವಲ್ಲಿ ಸಮರ್ಪಕ ಕಾರಣಗಳಿವೆಯೆಂದು ಮತ್ತು ಅಂಥವನು ಜಾಮೀನಿನ ಮೇಲೆ ಇರುವ ಅವಧಿಯಲ್ಲಿ ಯಾವುದೇ ಅಪರಾಧವನ್ನು ಮಾಡುವ ಸಂಭವವಿಲ್ಲವೆಂದು ಮನಗಂಡ ಹೊರತು:

ಪರಂತು ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನವನನ್ನು, ಅಥವಾ ಒಬ್ಬ ಮಹಿಳೆಯನ್ನು ಅಥವಾ ಅನಾರೋಗ್ಯ ಪೀಡಿತನನ್ನು ಅಥವಾ ಅಸ್ವಸ್ಥನನ್ನು ನ್ಯಾಯಾಲಯವು ಹಾಗೆ ನಿರ್ಧರಿಸಿದರೆ, ಜಾಮೀನಿನ ಮೇಲೆ ಬಿಡುಗಡೆಗೊಳಿಸಬಹುದು:

ಮತ್ತು ಪರಂತು ಈ ಪ್ರಕರಣವು ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿ ವ್ಯಕ್ತಿಗಳಿಗೆ ಅನ್ವಯವಾಗತಕ್ಕದ್ದಲ್ಲ.

**13. ನಷ್ಟಪರಿಹಾರ ನೀಡುವ ಆದೇಶ:-** ನ್ಯಾಯಾಲಯವು ಶಿಕ್ಷೆಯನ್ನು ವಿಧಿಸಿದಾಗ, ಆ ನ್ಯಾಯಾಲಯದಲ್ಲಿ ತೀರ್ಪು ಪ್ರಕಟಿಸುವ ಸಂದರ್ಭದಲ್ಲಿ ವಸೂಲಾದ ಜುಲ್ಮಾನೆಯ ಪೂರ್ಣ

ಅಥವಾ ಯಾವುದೇ ಭಾಗವು ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳಿಗೆ ಪರಿಹಾರ ನೀಡಲು ಅನ್ವಯವಾಗುವಂತೆ ಆದೇಶಿಸತಕ್ಕದ್ದು.

**14. ನಿಯಮಗಳ ರಚನಾ ಅಧಿಕಾರ:-** (1) ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲಿನ ಅಧಿಕಾರದ ಸಾಮಾನ್ಯನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳನ್ನು ಈ ಕೆಳಗಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧಿಸಬಹುದು, ಎಂದರೆ:-

(i) ಅಧಿನಿಯಮದ 3ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ನೋಂದಣಿಗಾಗಿ ಅರ್ಜಿಗಳು.

(ii) ಅಧಿನಿಯಮದ 3ನೇ ಪ್ರಕರಣದ (3)ನೇ ಉಪ-ಪ್ರಕರಣದ ಅಡಿಯಲ್ಲಿ ಅರ್ಜಿಗಳ ಜೊತೆಯಿರಿಸುವ ದಸ್ತಾವೇಜುಗಳು.

(iii) ಅಧಿನಿಯಮದ 3ನೇ ಪ್ರಕರಣದ (6)ನೇ ಉಪ-ಪ್ರಕರಣದ ಅಡಿಯಲ್ಲಿ ಅಧಿಕೃತಗೊಳಿಸಲಾದ ವ್ಯಕ್ತಿಯು ನಿರ್ವಹಿಸಬೇಕಾದ ರಿಜಿಸ್ಟರ್‌ಗಳು.

(iv) ಅಧಿನಿಯಮದ 5ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಗುರುತಿನ ಚೀಟಿಗಳನ್ನು ನೀಡುವುದು.

(v) ಅಧಿನಿಯಮದ 5ನೇ ಪ್ರಕರಣದ (3)ನೇ ಉಪ-ಪ್ರಕರಣದ ಅಡಿಯಲ್ಲಿನ ಗುರುತಿನ ಚೀಟಿಗಳ ಸಿಂಧುತ್ವ.

(vi) ಅಧಿನಿಯಮದ 7ನೇ ಪ್ರಕರಣದ (3)ನೇ ಉಪ-ಪ್ರಕರಣದ ಅಡಿಯಲ್ಲಿ ಮಾರುಕಟ್ಟೆ ಶುಲ್ಕದ ಸಂಗ್ರಹಣೆ.

(vii) ಅಧಿನಿಯಮದ 8ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕಲ್ಯಾಣ ನಿಧಿಯ ಸ್ಥಾಪನೆ.

(viii) ಅಧಿನಿಯಮದ 8ನೇ ಪ್ರಕರಣದ (2) ಮತ್ತು (3)ನೇ ಉಪ-ಪ್ರಕರಣಗಳ ಅಡಿಯಲ್ಲಿ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕಲ್ಯಾಣ ಮಂಡಳಿಯ ಸಂರಚಿಸುವುದು ಮತ್ತು ಅಧಿಸೂಚಿಸುವುದು.

(ix) ಅಧಿನಿಯಮದ 8ನೇ ಪ್ರಕರಣದ (6)ನೇ ಉಪ-ಪ್ರಕರಣದ ಅಡಿಯಲ್ಲಿ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕಲ್ಯಾಣನಿಧಿಯ ಬಳಕೆ ಮತ್ತು ಉದ್ದೇಶಗಳು.

(3) ಈ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಟುಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ

ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯಕ್ಕೆ ಬಾಧಕವಾಗತಕ್ಕದ್ದಲ್ಲ.

**15. ತೊಂದರೆಗಳನ್ನು ನಿವಾರಿಸುವ ಅಧಿಕಾರ**.- (1) ಈ ಅಧಿನಿಯಮದ ಉಪಬಂಧಗಳಿಗೆ ಪರಿಣಾಮ ನೀಡುವಲ್ಲಿ ಏನಾದರೂ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಆದೇಶದ ಮೂಲಕ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕವೆಂದು ಕಂಡುಬರುವ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು:

(2) ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲ ಸದನಗಳ ಮುಂದೆ ಮಂಡಿಸತಕ್ಕದ್ದು.

**16. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.-** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುದೇ ನಿಯಮಗಳಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ರಾಜ್ಯ ಸರ್ಕಾರದ ಯಾರೇ ಅಧಿಕಾರಿ ಅಥವಾ ಇತರ ನೌಕರರ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2024-25ರ ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವನೆಯನ್ನು ಜಾರಿಗೊಳಿಸಲು, ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ನೋಂದಣಿ ಮತ್ತು ಗುರುತಿಸುವಿಕೆಗಾಗಿ ಹಾಗೂ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಪ್ರಯೋಜನಕ್ಕಾಗಿ ಸ್ಕೀಮುಗಳನ್ನು ಅನುಷ್ಠಾನಗೊಳಿಸಲು ಕ್ಷೇಮಾಭಿವೃದ್ಧಿ ಮಂಡಲಿಯ ಮೂಲಕ ನಿರ್ವಹಿಸಬೇಕಾದ ನಿಧಿಯನ್ನು ಸ್ಥಾಪಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಶಾಸನವೊಂದನ್ನು ಅಧಿನಿಯಮಿತಿಗೊಳಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಮುಂದುವರೆದು ಕ್ಷೇಮಾಭಿವೃದ್ಧಿ ನಿಧಿಗೆ ಹಣಕಾಸು ಒದಗಿಸಲು ಮಾರುಕಟ್ಟೆ ಶುಲ್ಕವನ್ನು ವಿಧಿಸುವುದು ಯುಕ್ತವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ-3** | (i) (2)ನೇ ಉಪ-ಖಂಡವು, ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ;<br>(ii) (3)ನೇ ಉಪ-ಖಂಡವು, ನೋಂದಣಿಗಾಗಿ ಅಗತ್ಯವಿರುವ ದಸ್ತಾವೇಜುಗಳು ಮತ್ತು ಶುಲ್ಕಗಳನ್ನು ನಿಯಮಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.; ಮತ್ತು<br>(iii) (6)ನೇ ಉಪ-ಖಂಡವು, ಪಶು ಸಂಗೋಪನೆ ಮತ್ತು ಪಶುಪಾಲನಾ ಸೇವೆಗಳ ಇಲಾಖೆಯ ಆಯುಕ್ತನು ನಿರ್ವಹಿಸುವ ರಿಜಿಸ್ಟರುಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ-5** | (i) (1)ನೇ ಉಪ-ಖಂಡವು, ಗುರುತಿನ ಚೀಟಿಗಳನ್ನು ನೀಡುವಂಥ ವಿಧಾನವನ್ನು ನಿಯಮಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ; ಮತ್ತು<br>(ii) (3)ನೇ ಉಪ-ಖಂಡವು, ಗುರುತಿನ ಚೀಟಿಯ ಸಿಂಧುತ್ವಕ್ಕಾಗಿ ಕಾಲಾವಧಿಯನ್ನು ನಿಯಮಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ-7** | (3)ನೇ ಉಪ-ಖಂಡವು, 8ನೇ ಪ್ರಕರಣದ (1)ನೇ ಉಪ-ಪ್ರಕರಣದಡಿ ಸ್ಥಾಪಿಸಲಾದ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ನಿಧಿಗೆ ಸಂಗ್ರಹಿಸಲಾದ ಮಾರುಕಟ್ಟೆ ಶುಲ್ಕವನ್ನು ಜಮೆ ಮಾಡುವಂತ ವಿಧಾನವನ್ನು ನಿಯಮಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ-8** | (i) (1)ನೇ ಉಪ-ಖಂಡವು, ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ ಕ್ಷೇಮಾಭಿವೃದ್ಧಿ ನಿಧಿಯಲ್ಲಿ ಸಂಗ್ರಹಿಸಲಾದ ನಿಧಿಯ ಬಳಕೆಯ ವಿಧಾನವನ್ನು ನಿಯಮಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ;<br>(ii) (3)ನೇ ಉಪ-ಖಂಡವು, ಕ್ಷೇಮಾಭಿವೃದ್ಧಿ ಮಂಡಲಿಗೆ ಅಭಿವೃದ್ಧಿ ನಿಗಮದಿಂದ ಅಂಥ ಅಧಿಕಾರಿಗಳನ್ನು ನೇಮಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.; ಮತ್ತು<br>(iii) (6)ನೇ ಉಪ-ಖಂಡವು, ಯಾವುದೇ ಇತರ ಉದ್ದೇಶಗಳಿಗಾಗಿ ಕ್ಷೇಮಾಭಿವೃದ್ಧಿ ನಿಧಿಯ ಬಳಕೆಯ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ-14** | ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಕೆ. ವೆಂಕಟೇಶ್**
ಪಶು ಸಂಗೋಪನೆ ಮತ್ತು ರೇಷ್ಮೆ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**KARNATAKA LEGISLATIVE ASSEMBLY**

**SIXTEENTH LEGISLATIVE ASSEMBLY**

**SEVENTH SESSION**

# THE KARNATAKA TRADITIONAL MIGRATORY SHEPHERDS (WELFARE MEASURES AND PROTECTION AGAINST ATROCITIES) BILL, 2025

**(LA Bill No. 62 of 2025)**

A Bill to provide welfare measures for traditional migratory shepherds and prevent the commission of offences of atrocities against traditional migratory shepherds in the State of Karnataka.

Whereas it is expedient to provide welfare measures for traditional migratory shepherds, and to prevent the commission of offences of atrocities against traditional migratory shepherds in the State and for the matters connected therewith or incidental thereto.

Be it enacted by the Karnataka State Legislature in the Seventy sixth year of the Republic of India, as follows:-

**1. Short title and commencement.-**(1) This Act may be called the Karnataka Traditional Migratory Shepherds (Welfare Measures and Protection Against Atrocities) Act, 2025.

(2) It shall come into force as the State Government may, by notification, appoint.

**2. Definitions.-**In this Act, unless the context otherwise requires,-

(a) "Beneficiary" means a traditional migratory shepherd registered under section 4 of this Act;

(b) "Commissioner" means the Commissioner of the Department of Animal Husbandry and Veterinary Services, Government of Karnataka;

(c) "Department" means Department of Animal Husbandry and Veterinary Services, Government of Karnataka;

(d) "Development Corporation" shall mean the Karnataka Sheep and Wool Development Corporation Ltd. registered under the Companies Act, 2013

(Central Act 18 of 2013) by the Department of Animal Husbandry and Veterinary Services, Government of Karnataka;

(e) "Market" shall have the same meaning assigned to it under clause (18) of section 2 of the Karnataka Agricultural Produce Marketing (Regulation and Development) Act, 1966 (Karnataka Act 27 of 1966);

(f) "Marketing" shall have the same meaning assigned to it under clause (18A) of section 2 of the Karnataka Agricultural Produce Marketing (Regulation and Development) Act, 1966 (Karnataka Act 27 of 1966);

(g) "Market Fees" means a fee levied under section 7 of this Act;

(h) "Prescribed" means prescribed by rules made under this Act;

(i) "Traditional Migratory Shepherd" shall mean any person engaged primarily in traditional, migratory or seasonal rearing of sheep, goats or such livestock in search of fodder, water, and sustenance, along traditional routes; and

(j) "Welfare Board" means the traditional migratory shepherd Welfare Board constituted under section 8 to administer the fund established under this Act;

**3. Registration of traditional migratory shepherd.-**(1)Every traditional migratory shepherd shall be eligible for registration as a beneficiary under this Act.

(2) An application for registration shall be made in such form, as may be prescribed to the officer authorised by the State Government in this behalf.

(3) Every application made under sub-section (2), shall be accompanied by such documents and fee as may be prescribed.

(4) If the officer authorised by the State Government under sub-section (2) is satisfied that the applicant is eligible under the provisions of this Act and the rules made thereunder, he shall register the name of the such traditional migratory shepherd as a beneficiary under this Act:

Provided that, no application for registration shall be rejected by the authorised officer without giving an opportunity of being heard to the applicant.

(5) Any person aggrieved by the decision under sub-section (4) may, within thirty days from the date of such decision, prefer an appeal to the Commissioner

of the Department of Animal Husbandry and Veterinary Services or any other officer authorised by the State Government in this behalf and the decision of the Commissioner or such authorised officer on such appeal shall be final:

Provided that, the Commissioner or any other officer authorised by the State Government in this behalf may entertain an appeal after the expiry of the said period of thirty days if he is satisfied that the applicant was prevented by sufficient cause from filing an appeal in time.

(6) The Commissioner of the Department of Animal Husbandry and Veterinary Services shall authorise the officer to maintain such registers as may be prescribed.

**4. Entitlement to benefits.-**Subject to the provisions of this Act, every traditional migratory shepherd registered as a beneficiary under this Act shall be entitled to the benefits provided under this Act.

**5. Identity cards.-**(1)The Government shall notify the competent authority responsible for providing an identity card to every beneficiary, with their photograph duly affixed thereon and with enough space for entering the details of their dependents and livestock in such manner as may be prescribed.

(2) A beneficiary who has been issued an identity card under this Act shall produce the same whenever required by any officer of the Government.

(3) The identity card issued to any beneficiary under this Act shall be valid for such period of time as may be prescribed.

(4) The paper and electronic records of traditional migratory shepherds shall be maintained by the authorised officer under sub-section (6) of section 3.

**6. Framing of Schemes.-** (1) The State Government shall frame and notify, from time to time, suitable welfare schemes for traditional migratory shepherds on matters relating to,-

(i) affordable housing and grant of land for housing purposes;

(ii)life insurance, health insurance, animal insurance and disability cover;

(iii) health benefits;

(iv) educational benefits;

(v) skill upgradation;

(vi) food security;

(vii) livestock vaccination and treatment;

(viii) marketing support to traditional migratory shepherds for their products;

(ix) monetary compensation in the case of loss of livestock; and

(x) any other benefits as notified by the State Government from time-to-time.

(2) Any scheme notified by the State Government under this section may be,-

(a) wholly funded by the State Government; or

(b) partly funded by the State Government; or

(c) partly funded through contributions collected from the beneficiaries of the scheme as may be specified in the scheme by the State Government; or

(d) funded from any source including corporate social responsibility fund or any other such source as may be specified in the scheme.

(3) The State Government may seek financial assistance from the Central Government for the schemes framed by it.

**7. Levy of Market Fees.-**(1) Notwithstanding anything contained in this Act or any other law for time being in force, every person who buys sheep or goat from an authorised market shall pay to the market committee a market fee levied under the Karnataka Agricultural Produce Marketing (Regulation and Development) Act, 1966 (Karnataka Act 27 of 1966) on the total value of the transaction price.

(2) Where any person fails to pay the market fee payable under this section, the market committee shall have the power to impose a penalty under the Karnataka Agricultural Produce Marketing (Regulation and Development) Act,1966 (Karnataka Act 27 of 1966) and rules made thereunder.

(3) The collected market fee under sub-section (1), shall be credited to the Traditional Migratory Shepherd Welfare Fund established under sub-section (1) of section 8 in such manner, as may be prescribed.

**8. Traditional Migratory Shepherds Welfare Fund and Board.-**(1) The State Government shall, by notification in the Official Gazette, constitute a fund to be called the Traditional Migratory Shepherds Welfare Fund that shall be utilised for such purposes as may be prescribed.

(2) The State Government may constitute and notify a Board, to be called the Karnataka Traditional Migratory Shepherds Welfare Board, to administer the fund specified in sub-section (1).

(3) The Welfare Board shall consist of a Chairperson and such other officers from the Development Corporation as may be prescribed, with effect from such date as the State Government may by notification appoint in this behalf.

(4) The Welfare Board shall be a body corporate having perpetual succession and a common seal and subject to such restrictions as are imposed by or under this Act or any other rules made under this Act, shall be vested with the capacity of suing or being sued in its corporate name, of acquiring, holding and disposing of, moveable or immoveable property, of entering into contracts, and of doing all things necessary, proper or expedient for the purpose for which it is constituted.

(5) All expenditure incurred by the Welfare Board shall be defrayed out of the said fund.

(6) The Fund may also be utilized to implement schemes notified by the State Government under section 6 and for any other purpose as may be prescribed.

**9. Offences against traditional migratory shepherds.-**Whoever, not being a traditional migratory shepherd,-

(i) denies access of a traditional migratory shepherd to any public property, Government land or forest land (excluding reserve forest) without any lawful basis, such person shall be punishable with imprisonment for **a term of one year and with fine of rupees fifty thousand.**

(ii) denies any customary right of passage to public resort or customary right of grazing or obstructs the passage of a traditional migratory shepherd to prevent them from using or having access to a place of public resort to which other members of public have a right to use or access, such person shall be punishable with imprisonment for **a term of two years and with fine of rupees one lakh.**

(iii) intentionally insults or verbally abuses any traditional migratory shepherd, such person shall be punishable with imprisonment for **a term of six months but which may extend to five years and with fine of rupees one lakh**.

(iv) causes death of a traditional migratory shepherd by doing an act with the intention of causing death, or with the intention of causing such bodily injury as is likely to cause death, or with the knowledge that it is likely by such act to cause death, such person shall be punishable under relevant criminal laws for time being in force.

(v) behaves in a manner that constitutes sexual harassment, under the section 75 of the Bharatiya Nyaya Sanhita, 2023 (Central Act 45 of 2023) such person shall be punishable in accordance with the provisions of relevant Criminal Laws, for the time being in force.

(vi) prevents a traditional migratory shepherd from availing judicial recourse with regard to offences against traditional migratory shepherds and offences against property or any other offence under any law, for time being in force, such person shall be punishable with imprisonment for **a term of two years and fine of rupees fifty thousand.**

(vii) violates the due process of law and claims damages from a traditional migratory shepherd without approaching the appropriate authority shall be punishable with imprisonment for **a term of three years and fine of rupees one lakh.**

**10. Offences against property.-**(1) Whoever, not being a traditional migratory shepherd,-

(i) Causes damage to property, movable or otherwise, belonging to a traditional migratory shepherd; or

(ii) Moves property belonging to a traditional migratory shepherd without their consent; or

(iii) Dispossesses a traditional migratory shepherd of their property, is said to have committed an offence against the property of a traditional migratory shepherd,

- shall be punishable with imprisonment for **a term of two years** and with fine may be imposed equivalent to the value of damaged property.

(2) Whoever, not being a traditional migratory shepherd,-

(i) intending to take dishonestly any livestock out of the possession of any traditional migratory shepherd without that person's consent, moves that livestock in order to carry out such taking, carries it away or misappropriates it; or

(ii) intending to deny any livestock of a traditional migratory shepherd’s access to any public property, government land or forest land (excluding reserve forest), causes any damage to the livestock of the traditional migratory shepherd, is said to have committed an offence against the property of a traditional migratory shepherd,

-shall be punishable with imprisonment for **a term of two years** and with fine of rupees fifty thousand.

**11. Offences by public servants.-**Whoever, being a public servant, wilfully neglects his duties required to be performed by him under any law in force with the intent of causing injury or monetary loss to a traditional migratory shepherd, shall be punished under relevant civil services rules:

Provided that, any police officer who wilfully refuses to act on complaints from traditional migratory shepherds or undertake investigation in accordance with the Bharatiya Nagrik Suraksha Sanhita, 2023 (Central Act 46 of 2023) is said to have committed an offence for the purposes of this section.

**12. Offences to be cognisable and non-bailable.-** (1)Notwithstanding anything contained in the Bharatiya Nagarik Suraksha Sanhita, 2023 (Central Act 46 of 2023) no person accused of an offence under this Act shall be released on bail or on their own bond unless,-

(i) the Public Prosecutor has been given an opportunity to oppose the application for such release; and

(ii) where the Public Prosecutor opposes the application, the court is satisfied that there are reasonable grounds for believing that they are not guilty of such offence and that they are not likely to commit any offence while on bail:

Provided that, a person, who is under the age of eighteen years, or is a woman or is sick or infirm, may be released on bail, if the Court so directs.

Provided further that this section is not applicable to traditionally migratory shepherd persons.

**13. Order to pay compensation.-** When a Court imposes a sentence, the Court shall, when passing judgment, order the whole or any part of the fine recovered to be applied to compensate the traditional migratory shepherds.

**14. Power to make rules.-** (1) The State Government may, by notification in the Official Gazette with previous publication, make rules for carrying out the purposes of this Act.

(2) In particular and without prejudice to the generality of the foregoing power, such rules may provide for all or any of the following matters, namely:-

(i) applications for registrations of traditional migratory shepherds under sub-section (2) of section 3 of the Act.

(ii) documents to accompany the application under sub-section (3) of section 3 of the Act.

(iii) registers to be maintained by the authorised person under sub-section (6) of section 3 of the Act.

(iv) issuance of identity cards under sub-section (1) of section 5 of the Act.

(v) validity of the identity cards under sub-section (3) of section 5 of the Act.

(vi) collection of the market fee under sub-section (3) of section 7 of the Act.

(vii) establishment of the Traditional Migratory Shepherd Welfare Fund under sub-section (1) of section 8 of the Act.

(viii) constitution and notification of the Karnataka Traditional Migratory Shepherds Welfare Board under sub-section (2)and (3)of section 8 of the Act.

(ix) utilisation and purposes of the Traditional Migratory Shepherds Welfare Fund under sub-section (6) of section 8 of the Act.

(3) Every rule or notification made under this Act shall be laid as soon as may be after it is made, before each House of the State Legislature while it is in session, for a total period of thirty days which may be comprised in one session or in two or more successive sessions and if before the expiry of the session immediately following the session or the successive sessions aforesaid, both Houses agree in making any modification in the rule or notification or both Houses agree that the rule or notification should not be made, the rule or notification shall, from the date on which the modification or annulment is notified have effect only in such modified form or be of no effect as the case may be; so, however, that any such modification or annulment shall be without, prejudice to the validity of anything previously done under that rule or notification.

**15. Power to remove difficulties.-**(1)If any difficulty arises in giving effect to the provisions of this Act, the State Government may, by order, published in the Official Gazette, make such provisions, not inconsistent with the provisions of this Act, as may be necessary or expedient for removing the difficulty.

(2) Every order made under this section shall, as soon as may be after it is so made, be laid before the House of State Legislature.

**16. Protection of action taken in good faith.-** No suit, prosecution or other legal proceeding shall lie against the State Government or any officer, or other

employees of the State Government for anything which is in good faith done or intended to be done under this Act or rules made thereunder.

## STATEMENT OF OBJECTS AND REASONS

It is considered necessary to give effect to the proposal made in the Budget Speech of 2024-25 to enact a legislation to provide for registration and identification of traditional migratory shepherds and to establish a Fund to be administered by a Welfare Board to implement schemes for the benefit of traditional migratory shepherds. Further, it is considered expedient to levy a market fee to finance the welfare fund.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

## MEMORANDUM REGARDING DELEGATED LEGISLATION

| | |
|---|---|
| Clause-3 | (i) Sub-clause (2), empowers the State Government to make rules regarding making an application for registration of traditional migratory shepherd;<br>(ii) Sub-clause (3), empowers the State Government to make rules to prescribe the documents and fees required for registration; and<br>(iii) Sub-clause (6), empowers the State Government to make rules regarding maintaining of registers by the Commissioner of the Department of Animal Husbandry and Veterinary Services. |
| Clause -5 | (i) Sub-clause (1), empowers the State Government to make rules to prescribe the such manner of issuing the identity card; and<br>(ii) Sub-clause (3), empowers the State Government to make rules to prescribe the time period for the validity of identity card |
| Clause-7 | Sub-clause (3), empowers the State Government to make rules to prescribe such manner of crediting the collected market fee to the Traditional Migratory Shepherd Welfare Fund established under sub-section (1) of section 8. |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | |
|---|---|
| Clause-8 | (i) Sub-clause (1) empowers the State Government to make rules to prescribe manner of utilization of fund collected in Traditional Migratory Shepherds Welfare Fund;<br>(ii) Sub-clause (3) empowers the State Government to make rules to appoint such other officers from the Development Corporation to Welfare Board; and<br>(iii) Sub-clause (6) empowers the State Government to make rules regarding utilization of welfare fund for any other purpose. |
| Clause-14 | Empowers the State Government to make rules carrying out the purposes of the Act. |

The proposed delegation of legislative power is normal in character.

**K. VENKATESH**
Minister for Animal Husbandry and
Sericulture

**M.K. VISHALAKSHI**
Secretary
Karnataka Legislative Assembly

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH